International Journal of Kannada Research 2020; 6(1): 15-17

International Journal of Kannada Research
www.kannadajournal.com

ISSN: 2454–5813
IJKR 2020; 6(1): 15-17
© 2020 IJKR
www.kannadajournal.com
Received: 06-11-2019
Accepted: 10-12-2019

**ಹಣಮಂತ ವಿಠ್ಠಲ ಸರಿಕರ**
ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿ ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಕರ್ನಾಟಕ, ಭಾರತ

**ಡಾ. ಎಸ್. ಜಿ ಚಲವಾದಿ**
ಸಂಶೋಧನಾ ಮಾರ್ಗದರ್ಶಕರು ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಕರ್ನಾಟಕ, ಭಾರತ

**Corresponding Author:**
**ಹಣಮಂತ ವಿಠ್ಠಲ ಸರಿಕರ**
ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿ ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಕರ್ನಾಟಕ, ಭಾರತ

# ಸವದತ್ತಿ ಪ್ರದೇಶದಲ್ಲಿ ಆಯ್ದ ರಾಷ್ಟ್ರಕೂಟರ ಜೈನ ಶಾಸನಗಳು

**ಹಣಮಂತ ವಿಠ್ಠಲ ಸರಿಕರ, ಡಾ. ಎಸ್. ಜಿ ಚಲವಾದಿ**

**ಅಮೂರ್ತ**
ಯಾವುದೇ ಒಂದು ರಾಜಮನೇತನದ ಇತಿಹಾಸವನ್ನು ಖಚಿತವಾಗಿ ನಿರೂಪಿಸಬೇಕಾದರೆ ಪ್ರಮುಖ ಆಕರಗಳು ಮತ್ತು ಸಮಕಾಲಿನ ಶಾಸನಗಳು ಒಂದು ರಾಜ್ಯದ ಮತ್ತು ರಾಜವಂಶದ ಮಾಹಿತಿಯನ್ನು ಶಾಸನಗಳು ಬೆಳಕಿಗೆ ತರುವಲ್ಲಿ ಮುಂದಾಗುತ್ತವೆ. ಶಾಸನಗಳು, ಶಿಲಾಲೇಖಗಳು, ಮಾತ್ರವಾಗಿರದೆ ತಾಮ್ರಪಟಗಳು ಮತ್ತು ನಾಣ್ಯಗಳ ರೂಪದಲ್ಲಿ ಮಾಹಿತಿಯು ದೋರೆಯುತ್ತದೆ. ಇತಿಹಾಸದ ರಚನೆಗೆ ಈ ಆಕರಗಳು ಬೆನ್ನಲುಬಾಗಿರುತ್ತದೆ. ಇಂತಹ ಶಾಸನಗಳ ಹಿನ್ನಲೆಯಲ್ಲಿ ಸವದತ್ತಿಯ ಪ್ರದೇಶದಲ್ಲಿ ಐತಿಹಾಸಿಕವಾಗಿ ಕಂಡು ಬರುವ ರಾಷ್ಟ್ರಕೂಟರ ರಾಜಮನೆತವು ಸಹ ಮಹತ್ವವನ್ನು ಪಡೇದುಕೊಂಡಿದೆ. ಅಲ್ಲಿ ಆಳ್ವಿಕೆ ಮಾಡಿದ ರಾಜಮನೆತನಗಳ ಅರಸರು ತಮ್ಮ ನೇನಪಿಗಾಗಿ ಶಾಸನಗಳನ್ನು ಹೋರಡಿಸಿರುವುದು ಕಂಡು ಬರುತ್ತದೆ. ರಾಷ್ಟ್ರಕೂಟರ ಮಂಗಲ ರಾಜ ಮತ್ತು ಎರಡನೆಯ ಕೃಷ್ಣನು ಜೈನ ಧರ್ಮಕ್ಕೆ ವಿಶೇಷ ವಾದ ಪ್ರೋತ್ಸಾಹವನ್ನು ನೀಡಿರುವುದನ್ನು ನಾವು ಗಮನಿಸುತ್ತೆವೆ. ಅಷ್ಟೇ ಅಲ್ಲದೆ ಈ ಶಾಸನವು ಮತ್ತೆ ಬೇರೆ ಯಾವುದಾದರು ಮಾಹಿತಿಯನ್ನು ಓದಗಿಸಬಹುದೆ, ಎಂಬ ಉದ್ದೆಶದಿಂದ ಈ ಎರಡು ಶಾಸನಗಳನ್ನು ಈ ಒಂದು ಅಧ್ಯಯನಕ್ಕೆ ಒಳಪಡಿಸಿ ಇದರ ಮೂಲ ಮಾಹಿತಿಯನ್ನು ಹೋರ ತೆಗೆದು ಇದರ ಮಾಹಿತಿಯನ್ನು ಇಲ್ಲಿ ಮಂಡಿಸಲು ಇಚ್ಚಿಸುತ್ತೆನೆ.

**ಕೀವರ್ಡ್ಸ್:** ರಾಷ್ಟ್ರಕೂಟರು, ಸವದತ್ತಿ ಪ್ರದೇಶ, ಎರಡನೆ ಕೃಷ್ಣನ ಸವದತ್ತಿ ಶಾಸನ, ರಾಷ್ಟ್ರಕೂಟರ ಮಂಗಲ ರಾಜನ ಶಾಸನ

## ಪೀಠಿಕೆ

ಪ್ರಾಚೀನ ಕರ್ನಾಟಕವನ್ನು ಹಲವಾರು ರಾಜಮನೆತನಗಳು ಆಳಿರುವುದನ್ನು ಈ ಇತಿಹಾಸ ಎಂಬ ಚರಿತ್ರೇಯಲ್ಲಿ ಕಾಣಬಹುದು. ಈ ರಾಜ ವಂಶದ ಪೂರ್ವಜರು ಶಾಸನಗಳ ಮೂಲಕ ಹೊರಹೊಮ್ಮಿದ್ದಾರೆ. ರಾಜ್ಯ ಸಾಮ್ರಾಜ್ಯಗಳ ಪಾಲಿಗೆ ತಳಪಾಯದಂತಿರುವ ಈ ಶಾಸನಗಳು ರಾಜಕೀಯ ಬೆಳವಣಿಗೆಗಳ ಘಟ್ಟವನ್ನು ಪ್ರತಿನಿಧಿಸುತ್ತದೆ. ಈ ಸವದತ್ತಿ ಪ್ರದೇಶವು ಐತಿಹಾಸಿಕ ಮಹತ್ವವುಳ್ಳ, ಭವ್ಯ ಪರಂಪರೆಯ ಇತಿಹಾಸವನ್ನು ಹೊಂದಿರುವ ಒಂದು ಪ್ರದೇಶವಾಗಿದೆ. ಸಾಹಿತ್ಯ, ಧರ್ಮ, ಕಲೆ ಮತ್ತು ವಾಸ್ತುಶಿಲ್ಪಕ್ಕೆ ಹೆಸರಾಗಿರುವ ಈ ಪ್ರದೇಶವು ರಾಜಕೀಯವಾಗಿ ಮತ್ತು ಸಾಂಸ್ಕೃತಿಕವಾಗಿ ಸವಿಸ್ತಾರವಾದ ರಾಜಕೀಯ ಚರಿತ್ರೆಯನ್ನು ವೈಜ್ಞಾನಿಕ ಅಧ್ಯಯನದಿಂದ ಹೋರತೆಗೆಯುವುದಾಗಿದೆ.

## ಸವದತ್ತಿ ಪ್ರದೇಶದಲ್ಲಿ ರಾಷ್ಟ್ರಕೂಟರ ಆಳ್ವಿಕೆ

ರಾಷ್ಟ್ರಕೂಟರ ಸಾಮ್ರಾಜ್ಯದ ಸ್ಥಾಪಕನಾದ ದಂತಿದುರ್ಗನು ಬಾದಾಮಿ ಚಾಲುಕ್ಯರ ಕೊನೆಯ ಅರಸನಾದ ಎರಡನೇಯ ಕೀರ್ತಿವರ್ಮನನ್ನು ಸೋಲಿಸಿ ರಾಷ್ಟ್ರಕೂಟರ ಸಾಮ್ರಾಜ್ಯವನ್ನು ಸ್ಥಾಪಿಸುವುದರೊಂದಿಗೆ ಈ ಪ್ರದೇಶವು ರಾಷ್ಟ್ರಕೂಟರ ವಶವಾಯಿತು.

ಮೈಲಾಪ ತೀರ್ಥನೆಂಬ ಜೈನ ಗುರು ಸ್ಥಾಪಿಸಿದ ಕಾರೆಯ ಪಂಥದ ಪ್ರಥ್ವಿರಾಮನು ರಟ್ಟರ ಮೂಲ ಪುರುಷನು. ಇವನು ರಾಷ್ಟ್ರಕೂಟರ ಮುಮ್ಮಡಿ ಕೃಷ್ಣನ ಸಾಮಂತನಾಗಿದ್ದರಿಂದ ಸುಗಂಧವರ್ತಿ ರಾಷ್ಟ್ರಕೂಟರ ಆಡಳಿತಕ್ಕೆ ಒಳಪಟ್ಟಿತ್ತು. ಈ ಸಾಮ್ರಾಜ್ಯದಲ್ಲಿ ಎರಡನೆ ಕೃಷ್ಣ ಮತ್ತು ಮಂಗಲ ರಾಜರು ಆಳ್ವಿಕೆ ಮಾಡಿರುವುದನ್ನು ನಾವು ಕಾನುತ್ತೆವೆ. ರಾಷ್ಟರಕೂಟರ ಅರಸರು ಸಹ ಜೈನ ಧರ್ಮಕ್ಕೆ ವಿಶೇಷವಾದ ಪ್ರೋತ್ಸಾಹವನ್ನು ನಿಡಿದರಿಂದ ಸವದತ್ತಿ ಪ್ರದೇಶದಲ್ಲಿ ಅವರು ಮಾಡಿರುವ ಸಾಧನೆಯ

ಸಲುವಾಗಿ ಮತ್ತು ಅವರ ಸವಿ ನೇನಪಿಗಾಗಿ ಹುಲಿ ಗ್ರಾಮದಲ್ಲಿ ಒಂದು ಶಿಲಾಶಾಸನವನ್ನು ನಿರ್ಮಿಸಿದ ಮಂಗಲ ರಾಜ, ಸವದತ್ತಿಯಲ್ಲಿ ಎರಡನೆ ಕೃಷ್ಣನು ಒಂದು ಶಾಸನವನ್ನು ಹೋರಡಿಸಿರುವುದನ್ನು ನಾವು ಕಾನುತ್ತೆವೆ. ಈ ಎರಡು ಶಾಸನಗಳನ್ನು ಅವಲೋಕುಸಿದಾಗ 'ರಾಷ್ಟ್ರಕೂಟರ ಅರಸರು ಜೈನ ಧರ್ಮಕ್ಕೆ ವಿಶೇಶವಾದ ಪ್ರೋತ್ಸಾಹವನ್ನು ನಿಡೀದ್ದರು'ಎನ್ನುವ ನೀಜ ಸಂಗತಿ ತಿಳಿದು ಬರುತ್ತದೆ. ಈ ಎರಡು ಶಾಸನಗಳ ಸಾರ ಈ ಕೆಳಗಿನಂತಿದೆ.

**ಹೂಲಿ ಗ್ರಾಮದ ಶಾಸನ**

**ರಾಷ್ಟ್ರಕೂಟರ ಮಂಗಲ ರಾಜನ ಶಾಸನ**

ಗ್ರಾಮ – ಹೂಲಿ ಸ್ಥಳ – ಮರುಳ ಸಿದ್ದೇಶ್ವರ ಬೆಟ್ಟ

ವಂಶ – ರಾಷ್ಟ್ರಕೂಟ ರಾಜ – ಮಂಗಲ ರಾಜ

ಪ್ರಕಾರ – ಶಿಲಾಶಾಸನ ಮತ – ಜೈನ

ಭಾಷೆ ಮತ್ತು ಲಿಪಿ – ಸಂಸ್ಕೃತ + ಕನ್ನಡ ಶಾ, ಸಾ;19 ಕಾಲ – ಕ್ರಿ. ಶ. 5ನೇಯ ಶತಮಾನ

ಪ್ರಕಟನೆ – ಜರ್ನಲ್ ಆಪ್ ಕೆಯುಡಿ 1969

**ಶಾಸನದ ಪಾಠ**

1. @ ಸ್ವಸ್ತಿ [1 * ] ವಿಸ್ತೀರ್ಣ ಜ್ಞಾನನೇತ್ರೇಣಯಃ ಪಶ್ಯತಿ ಜಗತ್ತ್ರಯಮ್ [ 1* ]
2. ಸ ಜಯತ್ಯಮರೇನ್ದ್ರಾನಃ (ಣಾಂ) ಶಾನ್ತಿದಶ್ಯಾನ್ತಿರೀಶ್ವರಃ [॥1*]
3. ಸ್ವರ್ಗ್ಗಾಪವರ್ಗ್ಗ ಸೌಖ್ಯಾನಿ ದೇಹಿನೋ ಯೇನ ಭುಞ್ಜತೇ [1*]
4. ಸ ಧರ್ಮೋ ಜಯತಿ ಶ್ರೇಯಾನ್ಸತ್ಯ ನಿಷ್ಪಸ್ಸದಾರ್ಹತಾಮ್ ॥2॥
5. ಅಥ ಚಲಿಕ್ಯ ವಂಶಾಂಬರೋದಿತ ಚನ್ದ್ರಮಸಿ ಅನೇಕ ಯುದ್ಧ

**ಎರಡನೆಯ ತಾಮ್ರಪತ್ರ : ಮುಂಭಾಗ**

6. ಪ್ರತಿಲಬ್ದ ವಿಜಯಪತಾಕೇ ದಾನಾದಿ ಗುಣ ಸಂಪನ್ನೇಪ ಪುರನ್ದರ
7. ಪ್ರತಿಮ ತೇಜಸಿ ಪೃಥ್ವೀವಲ್ಲಭ ಪಟ್ಟಬದ್ದ ಲಲಾಟೇ
8. ಶ್ರೀಮತ್ ಮಙ್ಗಲರಾಜೇ ರಣವಿಕ್ರಾನ್ತದ್ವಿತೀಯ ನಾಮಧೇಯೇ
9. ಶಾಸತಿ ವಸುನ್ಧರಾಂತ್ರಿ ಸಮುದ್ರ ಪರ್ಯ್ಯನ್ತಾಂ ತಸ್ಮಾನುಶಾಸ
10. ನೇನ ಫಣಿ ಕುಲಾನ್ವಯ ಶ್ರೀಸೇನ್ದ್ರ ಕಣ್ಣಶಕ್ತಿಪ್ರಿಯ ತನಯೇನ

**ಎರಡನೆಯ ತಾಮ್ರಪತ್ರ : ಹಿಂಭಾಗ**

11. ರವಿಶಕ್ತಿನಾ ಶಕ್ತಿಮತಾ ಕಿರುವಟ್ಟಕೆರ್ ಗ್ರಾಮಮಧಿಪಾಲಯತಾ ತಸ್ಮಿನ್ನೇ
12. ವ ಹ್ರಾಮೇ ಪಞ್ಚಶನ್ನವರ್ತ್ತನಂ ಕ್ಷೇತ್ರಂ ದತ್ತಂ ಶಾನ್ತಿಭಗವತಶ್ಚೈಎತ್ಯಾಯ ತಸ್ಯಾನುಷ್ಠಾ [।*]
13. ಅಭಯನನ್ದ್ಯಚಾರ್ಯ್ಯಸ್ಯಃಇತಿಸ್ವಸ್ತಿ @ ಬಹುಭಿರ್ವ್ವಸುಧಾ ಭುಕ್ತಾರಾಜಭಿಸ್ಸ
14. ಗರಾದಿಭಿಃಯಸ್ಯ ಯಸ್ಯ ಯದಾ ಭೂಮಿಃತಸ್ಯ ತಸ್ಯ ತದಾ ಫಲಂ [॥2*]

**ಮೂರನೆಯ ತಾಮ್ರಪತರ : ಮುಂಭಾಗ**

15. ಸ್ವದತ್ತಾಂಪರದತ್ತಾ [0*] ವಾಯೋ ಹರೇತ ವಸುನ್ದರಾಂ [।*]
16. ಷಷ್ಠಂ ವರ್ಷ ಸಬಸ್ರಾಣಿ ನರಕೇ ಪಚಯತೇ ತು ಸಃ [॥4*]
17. ಪಿತೃಭಿರ್ವ್ವಂಶ ಜೈಸ್ಸಾರ್ದ್ಧಂ ಪುತ್ರ ಪೌತ್ರ್ಯಸಾ ಬಾನ್ಧವೈಃ [।]
18. ಷಷ್ಠಿಂ ವರ್ಷ ಸಹಸ್ರಾಣಿ ಕೌರವೇ ನರಕೇ ವಸೇತ್ [॥*]

**ಶಾಸನದ ಸಾರಾಂಶ**

ಕ್ರಿ. ಶ 5ನೆಯ ಶತಮಾನದ ಸವದತ್ತಿ ತಾಲೂಕಿನ ಹೂಲಿಗ್ರಾಮದ ಈ ಶಾಸನದಲ್ಲಿ ರಾಷ್ಟ್ರಕೂಟರ ಮಂಗಳೇಶನು ಅಲ್ಲಿ ಶಾಂತಿನಾಥ ಒಂದು ಬಸದಿಯನ್ನು ಕಟ್ಟಿಸಿದ ಉಲ್ಲೇಖವಿದೆ. ಮೂರು ಸಮುದ್ರದವರೆಗೆ ಇವನ ರಾಜ್ಯ ಹಬ್ಬಿತ್ತು. ಸೇಂದ್ರಕ ಕುಲವನ್ನು ಇಲ್ಲಿ ಉಲ್ಲೇಖಿಸಲಾಗಿದೆ. ಕಣ್ಣಶಕ್ತಿಯ ಮಗ ರವಿಶಕ್ತಿಯನ್ನು ಉಲ್ಲೇಖಿಸಲಾಗಿದೆ. ಕಿರುವಟ್ಟೆಕೆರೆ ಎಂಬ ಗ್ರಾಮದಲ್ಲಿಯ 500 ನಿವರ್ತನ ಭೊಮಿಯನ್ನು ಬಸದಿಯ ಜೀರ್ಣೋದ್ಧಾರಕ್ಕಾಗಿ ದಾನಮಾಡಿದ್ದಾನೆ.

**ರಾಷ್ಟ್ರಕೂರ ಎರಡನೆ ಕೃಷ್ಣನ ಸವದತ್ತಿ ಶಾಸನ**

ಗ್ರಾಮ – ಸವದತ್ತಿ ಸ್ಥಳ – ಬಸ್ತಿಗುಡಿ

ವಂಶ – ರಾಷ್ಟ್ರಕೂಟ ರಾಜ – ಎರಡನೆ ಕೃಷ್ಣ

ಪ್ರಕಾರ – ಶಾಸನ ಭಾಷೆ ಮತ್ತು ಲಿಪಿ – ಸಂಸ್ಕೃತ ಮತ್ತು ಕನ್ನಡ

ಕಾಲ – ಕ್ರಿ. ಶ 875 – 876 ವರದಿ/ಪ್ರಕಟಣೆ – ಖ.ಖ.ಖ ಗಿಂಟ.ಫಿಫಿ, ಓ೦. 13, ೮೦. 11–12

**ಶಾಸನದ ಪಾಠ**

1. @ದ್ವಾದಶಗ್ರಾಮಾಧಿಷ್ಠಾನಸ್ಯ ಸುಗನ್ಧವರ್ತ್ತಿಸಮನ್ವಿನಿ !! ಗ್ರಾಮೇ ಮುಳುಗುನ್ನಾಬ್ಯೇ ಸೀವಟೇ ಷಡ್ನಿವರ್ತ್ತನಂ ! ದೇವಸ್ಯ ಚರವೇದತ್ತಂ!
2. ನಮಶ್ಯಂ ಕನ್ನಭೂಭುಜ !! ತಸ್ಯ ದಕ್ಷಿಣಬಾಗೇ ತಿಂತ್ರಿಣೀವೃಕ್ಷಯೋರ್ದ್ಯಯೋ(1) ಮದ್ಯೇ
3. ಯಾ ಸ್ಥಿತಾ ಭೂಮಿರ್ದ್ವ[ಾ] ತ್ತಾ ಶ್ರೀ ಕನ್ನರಭೂಭುಜಾ !! ಸುಗನ್ಧವರ್ತಿ ಸೀಮೆಯಿನ್ದ ಪಡುವಲು
4. ರಿಯಕೋಲಲು ಮತ್ತರು 6 !!
5. ಶ್ರೀಮತ್ಪರಮಗಂಭೀರಸ್ಯಾದ್ವಾದಾಮೋಘಲಾಂಛನಂ ಜೀಯಾತ್ರೈಲೋಕ್ಯನಾಥಸ್ಯ ಶಾಸನಂ ಜಿನಶಾಸನಂ !!
6. ಶ್ರೀಮನ್ಮೈಳಾಪತೀರ್ಥಸ್ಯ ಗಣೇ ಕಾರೇಯನಾಮನಿ [1] ಬಭೂವೋಗ್ರತಪೋಯುಕ್ತ: ಮುಳ್ಳಭಟ್ಟಾರಕೋ ಗಣೇ !!
7. ತಚ್ಛಿಷ್ಯೋ ಗುಣವಾನ್ಸೂರಿ: ಗುಣಕೀರ್ತ್ತಿಮುನೀಶ್ವರ: [1] ತಸ್ಯಾಧಾಸಿಂದ್ರಕೀರ್ತ್ತಿಸ್ವಾಮೀಕಾಮ ಮದಾಪಹ: !!
8. ತಚ್ಛಾತ್ರ: ಪೃಥ್ವೀರಾಮ: ಲಕ್ಷ್ಮೀರಾಮಾವಿರಜಿತ: [1] ಸತ್ಯರತ್ನಪರೋಹಾದ್ರಿ: ಮೇರಡಸ್ಯಾಗ್ರನನ್ದನ: !!
9. ಶ್ರೀ ಕೃಷ್ಣರಾಜದೇವಸ್ಯ ಲಕ್ಷ್ಮೀಲಕ್ಷಿತವಕ್ಷಸ: [1] ನಮ್ರಭೂಪಾಳಬೃನ್ದಸ್ಯ ಪಾದಾಂಬುರುಹಸೇವಕ:
10. ಯಸ್ಯ ಬಾಳಪ್ರತಾಪಾಗ್ನಿಜ್ವಾಳಾನಿಕರಶೋಷಿತಸಮುದ್ರಪ್ರಾಸುಹೃದ್ದರ್ಪಸ್ಪರ ಸೋ ನಿಶೇಷಕೋ ಯಥಾ !! ಯಸ್ಯ ರಾಜನ್ವ
11. ಶ್ರೀ ಭೂಮಿರ್ಜ್ಞಾತಾನದ್ದಕರ್ರೈ: [1] ರಾಜ್ಞೋಯೋ ಧೀಮತೋ ನೀತಿಮಾರ್ಗ್ಗೋ ದುರ್ಗ್ಗಭಯಂಕರ: [1] ಯಸ್ಯ ಸಂಕ್ರೀಡತೇ ಕೀರ್ತ್ತಿ
12. ಹಂಸೀ ಲೋಕಸರೋವರೇ: [1] ಕದ್ವಾಕ್ಯರಿ ಪ್ರಶೃತಂ ಜಾತಂ ಪ್ರಣತಾರಾತಿ ಭೂಪತೇ !! ಸಪ್ತ ಸತ್ಯಾ ನವತ್ಯಾಚ ಸಮಾಯು
13. ಕ್ತೇ ಸಸಪ್ತಸು ಸಕಕಾಳೇಶ್ವತೀತೇಷು ಮನ್ಮಥಾಹ್ವಯವತ್ಸರೇ ಗ್ರಾಮೇ ಸುಗನ್ಧವರ್ತ್ಯಾಖ್ಯೇ ತೇನ ಭೂಪೇನ ಕಾರಿತಂ ಜಿನೇಂ
14. 14.ದ್ರಭವನಂ ದತ್ತಂ ತ್ಯಾಷ್ಟಾದಶ ನಿವರ್ತ್ತನಂ !! ಸ್ವಸ್ತಿ ಸಮಸ್ತಭುವನಾಶ್ರಯಂ ಶ್ರೀ ಪೃಥ್ವೀವಲ್ಲಭನಹಾರಾಧಿರಾಜಂ
15. 15.ಪರಮೇಶ್ವರ[ಂ] ಪರಮಭಟ್ಟಾರಕಂ ರಾಷ್ಟ್ರಕೂಟಕುಳತಿಳಕಂ ಶ್ರೀಮತ್ಕೃಷ್ಣರಾಜದೇವ ವಿಜಯರಾಜ್ಯಮುತ್ತರೋತ್ತರಾಭಿ

16. ವೃದ್ಧಿಪ್ರವರ್ದ್ಧಮಾನಮಾಚಂದ್ರಾರ್ಕ್ಕತಾರಂಬರಂ ಸಲತ್ತಮಿರೆ ತತ್ಪಾದಪದ್ಮೋಪಜೀವ !! ಸ್ವಸ್ತಿ ಸಮಧಿಗತಪಂಚಮಹಾಶಬ್ದ ಮಹಾ
17. ಸಾಮನ್ತ ವೀರಲಕ್ಷ್ಮೀಕಾನ್ತಂ ವಿರೋಧಿಸಾಮನ್ತನಗಜ್ರದಣ್ಣಂ ವಿದ್ವಜ್ಜನಕಮಳಮಾರ್ತ್ತಣ್ಣಂ ಸುಭಟಚೂಡಾಮಣಿ ಭೃತ್ಯಚಿನ್ತಾಮಣಿ
18. 18.ಶ್ರೀಮನ್ಮಹಾಸಾಮನ್ತೇನ ಪೃಥ್ವೀರಾಮೇನ ಸ್ವಕಾರಿತ ಜಿನೇನ್ದ್ರಭನಾಯ ಚತುರ್ಷು ಸ್ಥಳೇಷು ಸ್ಥಿತಮಷ್ಟಾದಶನಿವತನಂ ಸರ್ವ್ವನಮಶ್ಯಂ ದತ್ತಂ !! ಪೃ
19. ಥ್ವೀರಾಮೇನ ಯುದ್ದತ್ತಂ ನಿವತ್ತನಂ ಕಾರ್ತ್ತವೀರ್ಯ್ಯೇಣ ಭೂಮಿ: ಸ್ವಗುರವೇ ದತ್ತಂ ಸರ್ವಬಾದಾವಿವರ್ಜ್ಜತಂ ಸೂರ್ಯ್ಯೋರ್

**ಶಾಸನದ ಸಾರಾಂಶ**

ರಾಷ್ಟ್ರಕೂಟರ ಅರಸನಾದ ಎರಡನೆ ಕೃಷ್ಣನ ಆಳ್ವಿಕೆಯಲ್ಲಿ ರಟ್ಟ ಅರಸ ಮೇರಡನ ಮಗ ಪೃಥ್ವಿರಾಮನು ಇತನ ಸಾಮಂತನಾಗಿದ್ದನು. ಪೃಥ್ವಿರಾಮನು ಕಟ್ಟಿಸಿದ ಜಿನೇಂದ್ರಭವನಕ್ಕೆ 18 ನಿವರ್ತನ ಭೂಮಿಯನ್ನು ದಾನವಾಗಿ ಕೋಟ್ಟಿದ್ದನು ಈ ಶಾಸನ ಹೇಳುತ್ತದೆ. ಮೈಳಾಪತೀರ್ಥ ಮತ್ತು ಕಾರೇಯಗಣದ ಮೂಲಭಟ್ಟನ ಶಿಷ್ಯ ಗುಣಕೀರ್ತಿಮುನೀಶ್ವರ, ಅವನ ಶಿಷ್ಯ ಇಂದ್ರಕೀರ್ತಿಸ್ವಾಮಿನ್ ಎಂಬುವವನಿಗೆ ಈ ದಾನ ಸಲ್ಲುತ್ತದೆ. ಕನ್ನ ಎಂಬುವವನು ಸುಗಂಧವರ್ತಿ–12 ನಾಡೊಳಗಣ ಮುಳುಗುಂದದ ಸೀವಟೆಯಲ್ಲಿ 6 ನಿವರ್ತನ ಭೂಮಿಯನ್ನು ದಾನ ಮಾಡುತ್ತಾನೆ. ಕಾರ್ತವೀರ್ಯ ಮತ್ತು ಆತನ ಪತ್ನಿ ಭಾಗಲಾಂಬಿಕಾ ಅವರು ಸೂರ್ಯಗ್ರಹಣ ನಿಮಿತ್ತ ಹಿಂದೆ ಪೃಥ್ವಿರಾಮ ಕೊಟ್ಟಿದ್ದ ದಾನವನ್ನು ಪುನರುಜ್ಜೀವನಗೊಳಿಸುತ್ತಾರೆ ಎಂದು ದಾಕಲಿಸುತ್ತದೆ. ಈ ದಾನಿಗಳೆಲ್ಲರೂ ರಟ್ಟಕುಲಕ್ಕೆ ಸೇರಿದವರಾಗಿದ್ದು ಮೇರಡ ಆ ಕುಲದ ಹಿರಿಯವನಾಗಿದ್ದಾನೆ.

**ಉಪಸಂಹಾರ**

ಈ ಮೇಲೆ ತಿಳಿಸಿದ ಮಾಹಿತಿವು ರಾಷ್ಟ್ರಕೂಟರ ರಾಜಮನೆತನದಲ್ಲಿ ಆಳ್ವಿಕೆ ಮಾಡಿದದಂತಾ ಮಂಗಲ ರಾಜ ಮತ್ತು ಎರಡನೆಯ ಕೃಷ್ಣನು ತಾವು ಮಾಡಿದ ಸಾಧನೆಯು ಆ ಸೂರ್ಯ ಚಂದ್ರ ಇರುವ ತನಕ ತಮ್ಮ ನೇನಪು ಚೀರಕಾಲವಾಗಿ ಉಳಿಯಲು ಈ ಒಂದು ಶಾಸನವನ್ನು ಕೆತ್ತಿಸಿರುವುದನ್ನು ಕಾಣುತ್ತೆವೆ.

ಅದೇ ರೀತಿಯಾಗಿ ಸವದತ್ತಿ ಪ್ರದೇಶದಲ್ಲಿ ಆಳ್ವಿಕೆ ಮಾಡಿದ ಬಹಳಷ್ಟು ಅರಸು ಮನೆತನಗಳು ಕಂಡುಬರುತ್ತವೆ. ಅವರಲ್ಲಿ ರಾಷ್ಟ್ರಕೂಟ ಸಾಮ್ರಾಜ್ಯವು ಒಂದು ಈ ಸಾಮ್ರಾಜ್ಯವು ಹಲಸಿ, ಸವದತ್ತಿ, ಹುಲಿ, ಚಚಡಿ, ಮುನವಳ್ಳಿ ಇನ್ನು ಮುಂತಾದ ಕಡೇ ಆಳ್ವಿಕೆಯನ್ನು ಮಾಡಿರುವುದನ್ನು ನಾವು ಕಾನುತ್ತೆವೆ ಅದು ಹೇಗೆ ಎಂದರೆ ಈ ಮೇಲೆ ತಿಳಿಸಿದ ಶಾಸನಗಳನ್ನು ಆದಾರವಾಗಿಟ್ಟುಕೊಂಡು ಈ ಒಂದು ಮಾಹಿತಿಯನ್ನು ಈ ಲೇಖನದಲ್ಲಿ ವ್ಯಕ್ತಪಡಿಸಲಾಗಿದೆ.

**ಆಕಾರ ಗ್ರಂಥಗಳು**


1. ಡಾ. ಅರುಣ ಚಿ ಕಲ್ಲೋಳಿಕರ, 2015, ಬೆಳಗಾವಿ ಜಿಲ್ಲೆಯ ಕೋಟೆ ಕೋತ್ತಲಗಳು ಒಂದು ಅಧ್ಯಯನ ಪಿಎಚ್.ಡಿ ಮಹಾಪ್ರಬಂದ. ಪು – 27.
2. ಡಾ. ಎಸ್. ಜಿ ಚಲವಾದಿ, 2011, ಬೆಳಗಾವಿ ಜಿಲ್ಲೆಯ ಜೈನ ಧರ್ಮ, ಸುಧಾ ಪಬ್ಲಿಕೆಶನ್ಸ. ಪು – 189.
3. ಡಾ. ಕೆ. ಎಸ್ ಪಾಟೀಲ, 2010, ಸವದತ್ತಿ ತಾಲೂಕಿನ ಶಾಸನಗಳು, ಬೆಳಗಾವಿಯಲ್ಲಿ ನಡೆದ ಸಮ್ಮೇಳನದಲ್ಲಿ ಮಂಡಿಸಲಾದ ಲೇಖನ, ಪು – 130.
4. ಡಾ. ಬಿ. ಆರ್ ಹಂದೂರ, 2010, ಬೆಳಗಾವ ಜಿಲ್ಲೆಯ ಜೈನ ಶಾಸನಗಳು, ಡಾ. ಬಿ. ಆರ್ ಹಂದೂರ, ಪು – 16–17.